Generated by Foxit PDF Creator © Foxit Software
http://www.foxitsoftware.com For evaluation only.

**ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, 20ನೇ ಮಹಡಿ,**

ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಅಂಬೇಡ್ಕರ್ ವೀಧಿ, ಬೆಂಗಳೂರು - 1

ದೂರವಾಣಿ: 22863618, 22863845, 22865958.

ವೆಬ್‌ಸೈಟ್: www.gokdom.com

## ರಾಜ್ಯವಲಯ ಮುಂದುವರೆದ ಕಾರ್ಯಕ್ರಮಗಳು:

### 1) ಶಾದಿಮಹಲ್ /ಸಮುದಾಯಭವನ ನಿರ್ಮಾಣ:

ಸರ್ಕಾರಿ ಆದೇಶ ಸಂಖ್ಯೆ: ಸಕಇ 91 ಅಸಂಯೋ 2006, ಬೆಂಗಳೂರು ದಿನಾಂಕ: 17–07–2006 ರ ಆದೇಶದಲ್ಲಿ ಅಲ್ಪಸಂಖ್ಯಾತರ ಶಾದಿಮಹಲ್ ಸಮುದಾಯ ಭವನ ಯೋಜನೆಯ ಬಗ್ಗೆ ಪರಿಶೀಸಲಾಗಿ, ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ದರು, ಮತ್ತು ಸಿಖ್ ಜನಾಂಗದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸದರಿ ಜನಾಂಗಕ್ಕೆ ಸೇರಿದ ಖಾಸಗಿ ಸಂಘ ಸಂಸ್ಥೆಗಳ ಅನುಕೂಲಕ್ಕಾಗಿ ಶಾದಿಮಹಲ್/ಸಮುದಾಯಭವನಗಳ ನಿರ್ಮಾಣಕ್ಕಾಗಿ ಗರಿಷ್ಠ ಮಿತಿ ಜಿಲ್ಲಾ ಕೇಂದ್ರಗಳಲ್ಲಿ ರೂ. 50.00 ಲಕ್ಷಗಳಿಗೆ ಮೀರದಂತೆ ಮತ್ತು ಇತರೆ ಸ್ಥಳಗಳಲ್ಲಿ ರೂ 20.00 ಲಕ್ಷಕ್ಕೆ ಮೀರದಂತೆ ಅನುದಾನ ಮಂಜೂರು ಮಾಡುವ ಕಾರ್ಯಕ್ರಮಕ್ಕೆ ಈ ಕೆಳಕಂಡ ಷರತ್ತುಗಳನ್ನೊಳಪಟ್ಟು ಸರ್ಕಾರ ಮಂಜೂರಾತಿ ನೀಡಿದೆ.

(1) ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಶಾದಿಮಹಲ್/ಸಮುದಾಯ ಭವನಗಳ ನಿರ್ಮಾಣದಅಂದಾಜಿನ ಮೊತ್ತವು ರೂ.50.00 ಲಕ್ಷಗಳಿಗಿಂತ ಕಡಿಮೆ ಇರಕೂಡದು ಮತ್ತು ಸರ್ಕಾರದ ಆರ್ಥಿಕ ಸಹಾಯವು (ಅನುದಾನ)ಕಟ್ಟಡದ ಪ್ರಸ್ತಾವನೆಯ ಶೇ.50 ಕ್ಕೆ ಸೀಮಿತಗೊಳಿಸಲಾಗಿದೆ. ಯಾವುದೇ ಪ್ರಕರಣದಲ್ಲಿ ರೂ 50.00 ಲಕ್ಷಗಳಿಗಿಂತ ಹೆಚ್ಚಾಗಿ ಸರ್ಕಾದಿಂದ ಅನುದಾನ ನೀಡಲಾಗುವುದಿಲ್ಲ.

(2) ಜಿಲ್ಲಾ ಕೇಂದ್ರೇತರ ಸ್ಥಾನಗಳಲ್ಲಿ ಶಾದಿಮಹಲ್/ಸಮುದಾಯ ಭವನಗಳ ನಿರ್ಮಾಣದ ಅಂದಾಜಿನ ಮೊತ್ತವು ರೂ. 20.00 ಲಕ್ಷಗಳಿಗಿಂತ ಕಡಿಮೆ ಇರಕೂಡದು ಮತ್ತು ಸರ್ಕಾರದ ಆರ್ಥಿಕ ಸಹಾಯವು (ಅನುದಾನ) ಕಟ್ಟಡದ ಪ್ರಸ್ತಾವನೆಯ ಶೇ.50 ಕ್ಕೆ ಸೀಮಿತಗೊಳಿಸಲಾಗಿದೆ. ಯಾವುದೇ ಪ್ರಕರಣದಲ್ಲಿ ರೂ. 20.00 ಲಕ್ಷಗಳಿಗಿಂತ ಹೆಚ್ಚಾಗಿ ಸರ್ಕಾದಿಂದ ಅನುದಾನ ನೀಡಲಾಗುವುದಿಲ್ಲ.

(3) ಯೋಜನೆಯ ನಕಾಶೆ ಮತ್ತು ಅಂದಾಜು ಮೊತ್ತವನ್ನು ನೋಂದಾಯಿತ ಅಭಿಯಂತರರು (RegisteredEngineer) / ಧೃಡೀಕರಿತ ಅಭಿಯಂತರರು (CertifiedEngineer) / ಅನುಮೋದಿತ ಮೌಲ್ಯಮಾಪನಕಾರ (Approved Valuer) ಪರವಾನಗಿ ಪಡೆದ ಅಭಿಯಂತರರು (Licensed Engineer) ಅಥವಾ ಜಿಲ್ಲಾ ಪಂಚಾಯತ್‌ನ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಅಭಿಯಂತರರು ಇವರುಗಳು ದಾಖಲಾತಿಗಳನ್ನು ಪರಿಶೀಲಿಸಿ ಧೃಡೀಕರಿಸಬೇಕಾಗಿರುತ್ತದೆ.

Generated by Foxit PDF Creator © Foxit Software
http://www.foxitsoftware.com For evaluation only.

(4) ಶಾದಿಮಹಲ್/ಸಮುದಾಯಭವನ ಯೋಜನೆಯು ಒಂದು ಆದರ್ಶ ನಮೂನೆಗೆ ಅನುರೂಪವಾಗಿ, ಸಾರ್ವಜನಿಕ ಸಭೆಗಳಿಗೆ ಮುಖ್ಯವಾಗಿ ಮದುವೆ ಕಾರ್ಯಗಳನ್ನು ನಿರ್ವಹಿಸಲು ಬೇಕಾಗುವ ಎಲ್ಲಾ ಸೌಕರ್ಯಗಳನ್ನು ಹೊಂದಿರಬೇಕು, ಅಂದರೆ ಅಂತಹ ಕಾರ್ಯಗಳಿಗೆ ಬೇಕಾಗಿರುವ ಸಾಕಷ್ಟು ಕೊಠಡಿಗಳು, ಶೌಚಾಲಯಗಳು, ಸ್ನಾನದ ಕೊಠಡಿಗಳು, ಲಾಕರುಗಳು, ಆದರ್ಶ ಮಾದರಿಯ ಅಡುಗೆ ಕೊಠಡಿಗಳು ಮತ್ತು ವಾಹನಗಳು ನಿಲ್ಲಿಸಲು ಸಾಕಷ್ಟು ಸ್ಥಳವನ್ನು (Parking Space) ಹೊಂದಿದ್ದು, ಕೊನೆಯ ಪಕ್ಷ 500 ಮಂದಿಗಳಿಗೆ ಸಾಕಾಗುವ ಹಾಲ್ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಮತ್ತು 200 ಮಂದಿಗಳಿಗೆ ಸಾಕಾಗುವ ಹಾಲ್‌ಗಳು ಇತರೆ ಕೇಂದ್ರಗಳಲ್ಲಿ ಇರತಕ್ಕದ್ದು.

(5) ಶಾದಿಮಹಲ್/ಸಮುದಾಯಭವನಗಳನ್ನು ವಾಣಿಜ್ಯ ಮತ್ತು ವಾಣಿಜ್ಯೇತರ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಬಹುದು. ವಾಣಿಜ್ಯೇತರ ಉದ್ದೇಶಕ್ಕೆ ಹಾಗೂ ಇತರೆ ಸಾಮಾಜಿಕ ಸಮಾರಂಭಗಳು ಸೇರಿ ಉಪಯೋಗಿಸಿಕೊಳ್ಳಬಹುದಾಗಿದೆ, ವಾಣಿಜ್ಯೇತರ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುವ ಸಮಾರಂಭಗಳಿಗೆ ಸಮಂಜಸವಾದ ಬಾಡಿಗೆಯನ್ನು ನಿಗದಿಪಡಿಸಬೇಕಾಗಿದೆ. ಶಾದಿಮಹಲ್/ ಸಮುದಾಯ ಭವನಗಳ ಆಡಳಿತ ಮಂಡಳಿಯು ಬಾಡಿಗೆ ನಿಗದಿಪಡಿಸುವುದನ್ನು ಜಿಲ್ಲಾಧಿಕಾರಿಗಳಿಂದ ಕಡ್ಡಾಯವಾಗಿ ಅನುಮೋದಿಸಲ್ಪಡಿಸಿಕೊಳ್ಳತಕ್ಕದ್ದು. ಶಾದಿಮಹಲ್/ಸಮುದಾಯ ಭವನಗಳ ಬಾಡಿಗೆ ದರವನ್ನು ಪರಿಷ್ಕೃತಗೊಳಿಸಿ ಬೇಕಾದಲ್ಲಿಯೂ ಸಹ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯತಕ್ಕದ್ದು.

(6) ಈ ಕಾರ್ಯಕ್ರಮದಡಿಯಲ್ಲಿ ಅನುದಾನ ಪಡೆಯಲು ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳು:ಸಂಘಗಳು ಮಾತ್ರ ಅರ್ಹವಾಗಿರುತ್ತದೆ.

(7) ಅನುದಾನ ಪಡೆಯುವ ಸಂಸ್ಥೆಗಳು ರಾಜ್ಯದಲ್ಲಿ ವಕ್ಫ್ ಮಂಡಳಿಯಿಂದ: ನೋಂದಾಯಿತ ಸಂಸ್ಥೆಗಳಾಗಿರಬೇಕು. ನೋಂದಾಯಿತ ದಿನಾಂಕದಿಂದ ಈ ಸಂಸ್ಥೆಗಳು ಕನಿಷ್ಠ ಮೂರು ವರ್ಷಗಳಿಂದ ಪ್ರಚಲಿತವಾಗಿರಬೇಕು.

(8) ಅನುದಾನ ಬಯಸುವ ಸ್ವಯಂಸೇವಾ ಸಂಸ್ಥೆಗಳು ಉದ್ದೇಶಿಸಿರುವ ಕಟ್ಟಡ ನಿರ್ಮಾಣಕ್ಕೆ ತಮ್ಮ ಹೆಸರಿನಲ್ಲಿ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

(9) ಅನುದಾನವನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ಬಿಡುಗಡೆ ಮಾಡತಕ್ಕದ್ದು. ಜಿಲ್ಲಾಧಿಕಾರಿಗಳು ಅನುದಾನವನ್ನು ಸಂಸ್ಥೆಗಳಿಗೆ ಮರು ಬಿಡುಗಡೆ ಮಾಡುವ ಮುನ್ನ ಕಟ್ಟಡದ ಪ್ರಗತಿಯನ್ನು ಆಧರಿಸಿ ಬಿಡುಗಡೆ ಮಾಡತಕ್ಕದ್ದು.

(10) ಸಮುದಾಯಭವನ/ಶಾದಿಮಹಲ್ ಕಟ್ಟಡ ಕಾಮಗಾರಿಯನ್ನು ಮೊದಲನೇ ಕಂತಿನ ಅನುದಾನ ಪಡೆದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.

(11) ಈ ರೀತಿ ನಿರ್ಮಿಸಲಾದ ಸಮುದಾಯಭವನ/ಶಾದಿಮಹಲ್‌ನ್ನು ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸಬಾರದು.

ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ ಇವರು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಅನುಮೋದನೆ ಮತ್ತು ಹಣ ಬಿಡುಗಡೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

Generated by Foxit PDF Creator © Foxit Software
http://www.foxitsoftware.com For evaluation only.

**ಒದಗಿಸ ಬೇಕಾದ ದಾಖಲಾತಿಗಳು:**

1. ನಿಗದಿತ ನಮೂನೆಯಲ್ಲಿ ಅರ್ಜಿ
2. ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ
3. ಸಂಸ್ಥೆಯ ಬೈಲಾ ಪ್ರತಿ
4. ಅನುದಾನ ಪಡೆಯುವ ಬಗ್ಗೆ ಸಂಸ್ಥೆಯ ನಡವಳಿಗಳು.
5. ಸಂಸ್ಥೆಯ ಕಳೆದ ಎರಡು ವರ್ಷಗಳ ಆಡಿಟ್ ವರದಿ.
6. ಸಂಸ್ಥೆಯ ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ ಮತ್ತು ವಿಳಾಸ (ಸಕ್ಷಮ ಪ್ರಾಧಿಕಾರಿಗಳಿಂದ ದೃಡೀಕರಿಸಿದ)
7. ಕಟ್ಟಡ ನಕ್ಷೆ (ಮೂಲ ಪ್ರತಿ) ಪುರಸಭೆ/ನಗರಸಭೆ/ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಮಾಡಿರಬೇಕು ಮತ್ತು ಅಂದಾಜು ಪಟ್ಟಿ ಅಂಗೀಕೃತ ಅಭಿಯಂತರರಿಂದ ತಯಾರಿಸಲ್ಪಟ್ಟಿರಬೇಕು.
8. ಅನುದಾನ ಪಡೆಯುವ ಬಗ್ಗೆ ಸಂಸ್ಥೆಯಿಂದ ಉದ್ದೇಶಿತ ಕಾರ್ಯಕ್ಕೆ ಹಣ ಉಪಯೋಗ ಮಾಡುವ ಬಗ್ಗೆ ಮುಚ್ಚಳಿಕೆ ಪತ್ರ.
9. ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಮಾಡಿದ ಹಾಗೂ ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ತನಿಖಾ ವರದಿ.
10. ಸಂಸ್ಥೆಯು ಕಟ್ಟಡ ನಿರ್ಮಿಸಲು ಅಧಿಕೃತ ಪರವಾನಗಿ ಪಡೆದ ಬಗ್ಗೆ ದಾಖಲಾತಿ.
11. ಸಂಸ್ಥೆಯ ನಿವೇಶನದ ಖಾತಾ ಪ್ರತಿ.
12. ಸರ್ಕಾರದ ಅನುದಾನ ಹೊರತು ಸಂಸ್ಥೆಯ ಪಾಲನ್ನು ಭರಿಸುವ ಸಂಬಂಧದ ಮೂಲಗಳ ವಿವರ
13. ಸರ್ಕಾರದ ಅನುದಾನ ಪಡೆದು ನಿರ್ಮಿಸಿರುವ ಶಾದಿಮಹಲ್/ಸಮುದಾಯ ಭವನ ಕಟ್ಟಡವನ್ನು ಇತರೆ ಮತೀಯ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ಜನಾಂಗದವರು ಉಪಯೋಗಿಸಲು ಬಯಸಿದ್ದಲ್ಲಿ ರಿಯಾಯಿತಿ ದರದಲ್ಲಿ ನೀಡುವ ಬಗ್ಗೆ ಮುಚ್ಚಳಿಕೆ ಪತ್ರ.

## 2) ಹಾಸ್ಟೆಲ್ ಕಟ್ಟಡಗಳ ನಿರ್ಮಾಣ :

ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ/ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ.

## 3) ಹುಡ್ಕೋ ಸಾಲ ಮರುಪಾವತಿ:

ಅಲ್ಪಸಂಖ್ಯಾತ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳನ್ನು ಹುಡ್ಕೋ ನೆರವಿನಿಂದ ಸಾಲ ಪಡೆದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಮುಖಾಂತರ ನಿರ್ಮಿಸಲಾಗುತ್ತಿದೆ. ಸದರಿ ಸಾಲವನ್ನು ಹಂತ ಹಂತವಾಗಿ ಮರು ಪಾವತಿ ಮಾಡುವುದು.

## 4) ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ:

ರಾಜ್ಯದಲ್ಲಿ ಅಲ್ಪಸಂಖ್ಯಾತರ ಸೇವಾ ಸಂಸ್ಥೆಗಳು ಕಟ್ಟುವ ವಿದ್ಯಾರ್ಥಿನಿಲಯ ಕಟ್ಟಡಗಳಿಗೆ ಕಟ್ಟಡದ ಅಂದಾಜಿನ ಶೇ. 25 ಅಥವಾ ಗರಿಷ್ಠ ರೂ.1.00 ಲಕ್ಷದ ಅನುದಾನವನ್ನು ನೀಡುವ ಕಾರ್ಯಕ್ರಮವು ಅನುಷ್ಠಾನದಲ್ಲಿರುತ್ತದೆ. ಈ ಕಾರ್ಯಕ್ರಮವನ್ನು ಈ ಕೆಳಕಂಡ ನಿಬಂಧನೆಗಳನ್ವಯ ಜಾರಿಗೊಳಿಸಲಾಗುತ್ತಿದೆ.

(1) ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರುಮಾಡುವ ಅಧಿಕಾರವು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಇರುತ್ತದೆ.

(2) ಕಟ್ಟಡ ನಿರ್ಮಾಣಕ್ಕೆ ಅನುದಾನ ಪಡೆಯುವ ಸಂಸ್ಥೆಯು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿರಬೇಕುಬೇಕು.

Generated by Foxit PDF Creator © Foxit Software
http://www.foxitsoftware.com For evaluation only.

(3) ಕಟ್ಟಡ ನಿರ್ಮಾಣದ ಅನುದಾನವನ್ನು ಹೊಸದಾಗಿ ಕಟ್ಟಡದ ನಿರ್ಮಾಣಕ್ಕಾಗಿ ಅಥವಾ ಈಗಾಗಲೇ ಇರುವ ಕಟ್ಟಡದ ಹೆಚ್ಚುವರಿ ಭಾಗದ ನಿರ್ಮಾಣಕ್ಕೆ ಮಂಜೂರು ಮಾಡಬಹುದು.

(4) ಕಟ್ಟಡ ನಿರ್ಮಾಣದ ಅನುದಾನ ಮಂಜೂರಾತಿಗಾಗಿ ನಿಗಧಿ ಪಡಿಸಿರುವ ಅರ್ಜಿನಮೂನೆ ಅನುಬಂಧ–ಎ ದಲ್ಲಿ ಮಾಹಿತಿ ಸಲ್ಲಿಸಬೇಕು.

(5) ಈ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯದಲ್ಲಿ ಎಲ್ಲಾ ಜನಾಂಗದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು. ವಿದ್ಯಾರ್ಥಿನಿಲಯದ ಹೆಸರು ಯಾವುದೇ ಕೋಮು ಅಥವಾ ರಾಜಕೀಯ ಸಂಬಂಧ ಹೊಂದಿರಬಾರದು.

(6) ವಿದ್ಯಾರ್ಥಿನಿಲಯದ ಕಟ್ಟಡವು ಕನಿಷ್ಠ 50 ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಂತಿರಬೇಕು.

(7) ಈ ಕಾರ್ಯಕ್ರಮದಲ್ಲಿ ಅನುದಾನ ಪಡೆಯುವ ಸಂಸ್ಥೆ/ಖಾಸಗಿ ಸಂಸ್ಥೆಗಳು ಕರ್ನಾಟಕ ಸಂಘಗಳ ಸಹಕಾರಿ ಸಂಘಗಳ ನಿಯಮಗಳನ್ವಯ ನೋಂದಣಿಯಾಗಿರಬೇಕು.

(8) ಕಟ್ಟಡ ನಿರ್ಮಿಸುವ ಸಂಸ್ಥೆಯು ಸ್ವಂತ ನಿವೇಶನ ಹೊಂದಿರಬೇಕು ಅಥವಾ 20 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಭೋಗ್ಯಕ್ಕೆ ಪಡೆದಿರಬೇಕು.

(9) ಸಂಸ್ಥೆಯವರು ನಿಯಮಗಳನ್ನು ಪಾಲಿಸುವುದಾಗಿ ಮುಚ್ಚಳಿಕೆ ಪತ್ರ ಅನುಬಂಧ–ಸಿ ದಲ್ಲಿ ನೀಡಬೇಕು.

(10) ಕಟ್ಟಡ ಅಂದಾಜು/ನಕ್ಷೆಗಳು ಪರವಾನಗಿ ಹೊಂದಿದ ಅಧಿಕೃತ ಅಭಿಯಂತರರು ಅಥವಾ ವಾಸ್ತು ಶಿಲ್ಪಗಾರರಿಂದ ಅನುಮೋದಿಸಲ್ಪಟ್ಟಿರಬೇಕು.

(11) ಸಂಸ್ಥೆಯವರು ಮೊದಲನೇ ಕಂತಿನ ಹಣ ಪಡೆದ 2 ವರ್ಷಗಳೊಳಗಾಗಿ ಕಟ್ಟಡವನ್ನು ನಿರ್ಮಿಸುವಷ್ಟು ಸಾಮರ್ಥ್ಯ ಹೊಂದಿರಬೇಕು. 2 ವರ್ಷಗಳೊಳಗಾಗಿ ಕಟ್ಟಡ ನಿರ್ಮಿಸಿದಿದ್ದಲ್ಲಿ ಮಂಜೂರು ಮಾಡಿದ ಹಣವನ್ನು ಶೇ.18ರ ಬಡ್ಡಿಯ ಮೇಲೆ ವಸೂಲಿ ಮಾಡಬೇಕು. ಕಟ್ಟಡ ನಿರ್ಮಾಣಕ್ಕೆ ಹೆಚ್ಚುವರಿ ಕಾಲಾವಕಾಶ ನೀಡತಕ್ಕದ್ದಲ್ಲ.

(12) ನಿರ್ಮಾಣ ಮಾಡುವ ಕಟ್ಟಡವನ್ನು ವಿದ್ಯಾರ್ಥಿನಿಲಯಕ್ಕಾಗಿಯೇ ಉಪಯೋಗಿಸಬೇಕು. ಬೇರೆ ಉದ್ದೇಶಕ್ಕೆ ಬಳಕೆಯಾದಲ್ಲಿ ಈ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡುವ ಹಕ್ಕನ್ನು ಸರ್ಕಾರವು ಉಳಿಸಿಕೊಂಡಿರುತ್ತದೆ.

(13) ಅನುದಾನ ಪಡೆಯುವ ಸಂಸ್ಥೆಯು ಕರ್ನಾಟಕ ಆರ್ಥಿಕ ಸಂಹಿತೆ 32–ಬಿ ನಮೂನೆಯಲ್ಲಿ ವಹಿಯನ್ನು ನಿರ್ವಹಿಸಬೇಕು.

(14) ಮತೀಯ ಅಲ್ಪಸಂಖ್ಯಾತರ ಸಮುದಾಯದ ಸಂಸ್ಥೆಗಳಾದ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಜೈನ್ ಸಂಸ್ಥೆಗಳಿಗೆ 60:20:20 ರ ಅನುಪಾತದಲ್ಲಿ ಅನುದಾನ ನೀಡಬಹುದು.

(15) ಜಿಲ್ಲಾಧಿಕಾರಿಗಳಿಗೆ ಅನುದಾನ ಮಂಜೂರುಮಾಡುವ ಅಧಿಕಾರವಿರುತ್ತದೆ. ಮಂಜೂರುಮಾಡಿದ ಹಣಬಿಡುಗಡೆಗಾಗಿ ಜಿಲ್ಲಾಧಿಕಾರಿಗಳು ನಿರ್ದೇಶಕರು. ಅಲ್ಪಸಂಖ್ಯಾತರ ಇಲಾಖೆ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಬೇಕು.

Generated by Foxit PDF Creator © Foxit Software
http://www.foxitsoftware.com For evaluation only.

(16) ನಿರ್ದೇಶಕರು ಅಲ್ಪಸಂಖ್ಯಾತರ ಇಲಾಖೆ ಬೆಂಗಳೂರು, ಇವರಿಂದ ಅನುದಾನ ಬಿಡುಗಡೆಯಾದ ನಂತರ ಜಿಲ್ಲಾಧಿಕಾರಿಗಳು ಕಟ್ಟಡ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಬೇಕು.

**ವೇಳಾ ಪಟ್ಟಿ:**

| | | |
|---|---|---|
| 1. | ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸುವುದು. | ಜೂಲೈ 15 |
| 2. | ಪ್ರಸ್ತಾವನೆ ಸ್ವೀಕರಿಸಲು ಕಡೆಯ ದಿನಾಂಕ | ಜೂಲೈ 31 |
| 3. | ಪ್ರಸ್ತಾವನೆಗಳ ಪರಿಶೀಲನೆ ಹಾಗೂ ಹಣ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸುವುದು. | ಸೆಪ್ಟಂಬರ್ 15 |

## 5) ಹೊಸ ಮೊರಾರ್ಜಿದೇಸಾಯಿ ವಸತಿ ಶಾಲೆಗಳು:

ಅಲ್ಪಸಂಖ್ಯಾತರ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 2006–07ನೇ ಸಾಲಿನಿಂದ ಜಾರಿಗೆ ಬರುವಂತೆ ಈ ಕೆಳಕಂಡ ಸ್ಥಳಗಳಲ್ಲಿ ಆಂಗ್ಲ ಮಾಧ್ಯಮವನ್ನು ಅಳವಡಿಸಿಕೊಂಡು ಪ್ರತಿ ಶಾಲೆಗಳಲ್ಲಿ ಒಂದು ಉರ್ದು ಭೋದಕರನ್ನು ನೇಮಿಸಿಕೊಳ್ಳಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ. 1). ಹೊಳೆನರಸೀಪುರ, 2). ಗಂಗಾವತಿ, 3). ರಾಯಚೂರು, 4). ಹರಿಹರ, 5). ಹಾವೇರಿ, 6). ಯಲ್ಬುರ್ಗಾ ತಾ|| ತಳಕಲ್ ಗ್ರಾಮದಲ್ಲಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ ಸಕಇ 8 ಅಸಂಯೋ 2007 ದಿನಾಂಕ 08.03.2007ರ ಆದೇಶದಲ್ಲಿ 8 ಜಿಲ್ಲೆಗಳಲ್ಲಿ 1). ಬೆಂಗಳೂರು ಉತ್ತರ ತಾ|| 2). ವಿಜಾಪುರ ತಾ|| ಬಿಜಾಪುರ ಜಿಲ್ಲೆ ಉಳ್ಳಾಲ 3). ಮಂಗಳೂರು ತಾ|| ದಕ್ಷಿಣ ಕನ್ನಡ ಜಿಲ್ಲೆ, 4). ವಿರಾಜಪೇಟೆ, ಕೊಡಗು ಜಿಲ್ಲೆ 5). ನಾಗಮಂಗಲ ತಾ|| ಮಂಡ್ಯ ಜಿಲ್ಲೆ, 6). ಸಿರ್ರ ತಾ|| ತುಮಕೂರು ಜಿಲ್ಲೆ, 7). ಬ್ರಹ್ಮಾವರ, ಉಡುಪಿ ಜಿಲ್ಲೆ, 8). ದಾವಣಗೆರೆ ತಾ|| ದಾವಣಗೆರೆ ಜಿಲ್ಲೆಗಳ ಆಂಗ್ಲ ಮಾಧ್ಯಮ ಹೆಣ್ಣು ಮಕ್ಕಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪ್ರಾರಂಭಿಸಲು ಮಂಜೂರಾತಿ ನೀಡಿದೆ.

## 6) ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ (Skill Development Scheme)

ಸರ್ಕಾರಿ ಆದೇಶ ಸಂಖ್ಯೆ: ಸಕಇ 87 ಅಸಂಯೋ 2006 (3), ಬೆಂಗಳೂರು, ದಿನಾಂಕ: 09–08–2006ರ ಆದೇಶದಲ್ಲಿ ಅಲ್ಪಸಂಖ್ಯಾತರ ಯುವಕ/ಯುವತಿಯರಿಗೆ ನಿರುದ್ಯೋಗ ನಿವಾರಣಾ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಸಬಲಪಡಿಸುವ ಉದ್ದೇಶದಿಂದ, ಸೂಕ್ತ ಅಭ್ಯರ್ಥಿಗಳಿಗೆ ತರಬೇತಿ ನೀಡಲು ನರ್ಸಿಂಗ್, ಗಗನಸಖಿ, ಕಂಪ್ಯೂಟರ್, ಜಿಟಿ ಮತ್ತು ಟಿಸಿ ಹಾಗೂ ಇತರೆ ತರಬೇತಿಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಅನುಮತಿ ನೀಡಿ, ಆದೇಶಿಸಿದೆ.

**ಷರತ್ತುಗಳು:**

(1) ಅಭ್ಯರ್ಥಿಯು ಅಲ್ಪಸಂಖ್ಯಾತರ ಸಮುದಾಯಕ್ಕೆ ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಬೌದ್ದರು, ಸಿಕ್ಕರು ಹಾಗೂ ಪಾರ್ಸಿಗಳು) ಸೇರಿದ್ದು, ಕುಟುಂಬದ ಆದಾಯ ಮಿತಿ ಎಲ್ಲಾ ಮೂಲಗಳಿಂದ ವರ್ಷಕ್ಕೆ ರೂ. 2.00 ಲಕ್ಷಗಳಿಗಿಂತ ಮೀರಿರಬಾರದು. (ಜಾತಿಯ ಆದಾಯ ಪ್ರಮಾಣ ಪತ್ರವನ್ನು ಅಭ್ಯರ್ಥಿಯು ಸಲ್ಲಿಸತಕ್ಕದ್ದು)

Generated by Foxit PDF Creator © Foxit Software
http://www.foxitsoftware.com For evaluation only.

(2) ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಡುವುದಿಲ್ಲವೆಂದು ಮುಚ್ಚಳಿಕೆಯನ್ನು ನೀಡತಕ್ಕದ್ದು ಅಭ್ಯರ್ಥಿಯು ತರಬೇತಿಯನ್ನು ಮಧ್ಯೆ ಬಿಡಲು ಇಚ್ಛಿಸಿದ್ದಲ್ಲಿ, ಖರ್ಚಾಗಿರುವ ಅನುದಾನದ ಮೊತ್ತವನ್ನು ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು.

(3) ಈ ಕಾರ್ಯಕ್ರಮದ ಅಧಿಕೃತ ಹಾಗೂ ಸ್ವೀಕೃತಿ ಪಟ್ಟಿಯನ್ನು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಇವರು ನಿರ್ವಹಿಸುವುದು ಹಾಗೂ ರಕ್ಷಿಸಿಡುವುದು.

ಕಾಲ ಕಾಲಕ್ಕೆ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಅಭ್ಯರ್ಥಿಗಳು ತರಬೇತಿ ಪಡೆಯುತ್ತಿರುವ ಸಂಸ್ಥೆಗಳಿಗೆ ಭೇಟಿ ನೀಡಿ ಅಭ್ಯರ್ಥಿಗಳ ಹಾಜರಾತಿ ಹಾಗೂ ತರಬೇತಿಯನ್ನು ಸಮರ್ಪಕವಾಗಿ ನೀಡಲಾಗುತ್ತಿದೆಯೇ? ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

**ಅ) ಜಿ.ಎನ್.ಎಂ. ಮತ್ತು ಬಿ.ಎಸ್ಸಿ. ತರಬೇತಿ:–**

ಅಲ್ಪಸಂಖ್ಯಾತರ ಯುವಕ/ಯುವತಿಯರು ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರಬೇಕು. ವಾರ್ಷಿಕ ಆದಾಯ ಮಿತಿ ರೂ. 2.00 ಲಕ್ಷವಾಗಿರಬೇಕು. ಕೋರ್ಸ್‌ನ ಅವಧಿ ಜಿ.ಎನ್.ಎಂ 3 ವರ್ಷ 6 ತಿಂಗಳು ಕೋರ್ಸಿನ ವೆಚ್ಚ ರೂ. 6000/– ಬಿ.ಎಸ್ಸಿ 4 ವರ್ಷಗಳು ವಾರ್ಷಿಕ ರೂ. 1000/– ಸರ್ಕಾರಿ ಸೀಟುಗಳ ಪ್ರಕಾರದಂತೆ ತರಬೇತಿ ಶುಲ್ಕವನ್ನು ಇಲಾಖೆಯಿಂದ ಆಯಾಯ ಜಿಲ್ಲೆಗಳಿಗೆ ನೀಡಲಾಗುವುದು.

**ಆ) ಫ್ರೋಷೆನಲ್ ಏರ್ ಹೋಸ್ಟೆಸ್ ಅಂಡ್ ಹಾಸ್ಪೀಟಲಿಟಿ ಮ್ಯಾನೇಜ್‌ಮೆಂಟ್ ಕೆರಿಯರ್ (ಗಗನ ಸಖಿ) ತರಬೇತಿ :–**

ಅಲ್ಪಸಂಖ್ಯಾತ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರು ಫ್ರೋಷೆನಲ್ ಏರ್ ಹೋಸ್ಟೆಸ್ ಅಂಡ್ ಹಾಸ್ಪಿಟಲಿಟಿ ಮ್ಯಾನೇಜ್‌ಮೆಂಟ್ ಕೆರಿಯರ್ (ಗಗನ ಸಖಿ) ತರಬೇತಿ ಪಡೆಯಲಿಚ್ಛಿಸಿದಲ್ಲಿ, ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. ಶೇ. 60 ಮತ್ತು ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿರಬೇಕು.(ವಿಜ್ಞಾನ ಐಚ್ಛಿಕ ವಿಷಯವಾಗಿಬೇಕು.) ವಯೋಮಿತಿ 18 ರಿಂದ 24 ವರ್ಷದೊಳಗಿರಬೇಕು. ವಾರ್ಷಿಕ ರೂ. 2.00 ಲಕ್ಷ ಆದಾಯ ಮಿತಿಯೊಳಗಿರಬೇಕು. ತರಬೇತಿ ಅವಧಿ 12 ತಿಂಗಳು, ತರಬೇತಿಯ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಯೇ ಪಾವತಿಸುತ್ತದೆ ಹಾಗೂ ಉಚಿತ ಊಟ ಮತ್ತು ವಸತಿ ನೀಡಲಾಗುವುದು.

**ಇ) ಕಂಪ್ಯೂಟರ್ ತರಬೇತಿ:–**

ಅಲ್ಪಸಂಖ್ಯಾತ ನಿರುದ್ಯೋಗಿ ಯುವಕ/ಯುವತಿಯರಿಗಾಗಿ ಕಂಪ್ಯೂಟರ್ ತರಬೇತಿಯನ್ನು ಇಸಿಐಎಲ್ ಸಂಸ್ಥೆಗೆ ನೀಡಲಾಗಿದೆ. ಈ ತರಬೇತಿಗೆ ಸೇರಲಿಚ್ಛಿಸುವ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು. ವಾರ್ಷಿಕ ಆದಾಯ ರೂ. 2.00 ಲಕ್ಷದೊಳಗಿರಬೇಕು. ವಯೋಮಿತಿ 18 ರಿಂದ 35 ವರ್ಷದೊಳಗಿರಬೇಕು. ತರಬೇತಿಯ ಅವಧಿ 4 ರಿಂದ 6 ತಿಂಗಳು ಮಾತ್ರ.

ಸದರಿ ಯೋಜನೆಯ ಅನುಷ್ಠಾನ ಕುರಿತಂತೆ ಅವಶ್ಯಕತೆ/ಆಯವ್ಯಯ ಲಭ್ಯತೆ ಅನುಸಾರ ರಾಜ್ಯಮಟ್ಟದಲ್ಲಿ ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ ಇವರು ತರಬೇತಿಯ ಅಭ್ಯರ್ಥಿಗಳನ್ನು ಹಾಗೂ ತರಬೇತಿ ನೀಡುವ ಸಂಸ್ಥೆಗಳನ್ನು ಗುರುತಿಸತಕ್ಕದ್ದು ಹಾಗೂ ಜಿಲ್ಲೆಗಳಲ್ಲಿ ನೀಡಬಹುದಾದ ತರಬೇತಿಗಳಿಗೆ (ಸೂಕ್ತ ಸಂಸ್ಥೆಗಳು ಹಾಗೂ ಅವಶ್ಯವಿದ್ದ ಮೂಲಭೂತ ಸೌಕರ್ಯಗಳು ಲಭ್ಯವಿದ್ದಲ್ಲಿ) ಅಭ್ಯರ್ಥಿಗಳ ಆಯ್ಕೆಯನ್ನು ಈ ಕೆಳಕಂಡ ಅನುಷ್ಠಾನ ಸಮಿತಿಯು ಆಯ್ಕೆ ಮಾಡತಕ್ಕದ್ದು ಹಾಗೂ

Generated by Foxit PDF Creator © Foxit Software
http://www.foxitsoftware.com For evaluation only.

ಅದಕ್ಕೆ ಅವಶ್ಯವಾದ ಆಯವ್ಯಯವನ್ನು ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ ಇವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತರಬೇತಿಗಳನ್ನು, ಅನುಷ್ಠಾನಗೊಳಿಸಲು ಬಿಡುಗಡೆ ಮಾಡತಕ್ಕದ್ದು.

**ಜಿಲ್ಲಾ ಅನುಷ್ಠಾನ ಸಮಿತಿ:**

1) ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು – ಅಧ್ಯಕ್ಷರು

2) ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು. – ಸದಸ್ಯ ಕಾರ್ಯದರ್ಶಿ

ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸಮಿತಿಯ ಅಧ್ಯಕ್ಷರಿಗೆ ಅವಶ್ಯವಿದ್ದಲ್ಲಿ ಹೆಚ್ಚುವರಿ ಸದಸ್ಯರನ್ನು ನೇಮಿಸಲು ಅಧಿಕಾರ ನೀಡಲಾಗಿದೆ. ವಿಶೇಷವಾಗಿ ಪ್ರಸ್ತಾವನೆಯಲ್ಲಿ ವಿವರಿಸಿದ ತರಬೇತಿಗಳಿಗೆ ಸಂಬಂಧಿಸಿದಂತೆ ಆಯಾಯ ತರಬೇತಿಗಳ ತಜ್ಞರು ಅಥವಾ ಆಯಾಯ ತರಬೇತಿಗಳಿಗೆ ನೀಡುವ ಸಂಸ್ಥೆಯ ಮುಖ್ಯಸ್ಥರಿಗೆ ಸಂದರ್ಭಾನುಸಾರ ಅನುಷ್ಠಾನ ಸಮಿತಿಯ ಸದಸ್ಯರಾಗಿ ನೇಮಿಸಿಕೊಳ್ಳಬಹುದಾಗಿದೆ.

**7) ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಕಲಿಕೆ ಮತ್ತು ಭೋದನಾ ಸಾಮಗ್ರಿ ಪೂರೈಕೆ ಮಾಡುವ ಯೋಜನೆ:**

ಸರ್ಕಾರಿ ಆದೇಶ ಸಂಖ್ಯೆ: ಸಕಇ 87 ಅಸಂಯೋ 2006 (4), ಬೆಂಗಳೂರು, ದಿನಾಂಕ: 09–08–2006ರ ಆದೇಶದಲ್ಲಿ ಸರ್ಕಾರದ ಮಾನ್ಯತೆ ಪಡೆದ ಅಲ್ಪಸಂಖ್ಯಾತರ ಶಾಲೆಗಳ ಕಲಿಕೆ ಗುಣಮಟ್ಟ ಹೆಚ್ಚಿಸಲು ಹಾಗೂ ಕಲಿಕೆಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಒದಗಿಸಲು ಮತ್ತು ಭೋದಕರ ಭೋಧನಾ ಸಾಮರ್ಥ್ಯವನ್ನು ಭೋದನಾ ಪರಿಕರ ಮೂಲಕ ಹೆಚ್ಚಿಸಿ ಅಲ್ಪಸಂಖ್ಯಾತರ ಮಕ್ಕಳನ್ನು ಉತ್ತಮ ಶಿಕ್ಷಣ ಪಡೆಯುವುದರಲ್ಲಿ ನೆರವಾಗಲು ಸರ್ಕಾರದ ಮಾನ್ಯತೆ ಪಡೆದ ಅಲ್ಪಸಂಖ್ಯಾತರ ಪ್ರತಿ ಶಿಕ್ಷಣ ಸಂಸ್ಥೆಗೆ ರೂ. 10,000/– (ರೂ. ಹತ್ತು ಸಾವಿರಗಳು) ಮೀರದಂತೆ ಕಲಿಕೆ ಮತ್ತು ಭೋದನಾ ಸಾಮಗ್ರಿ ಪೂರೈಕೆ ಮಾಡಲು ಸದರಿ ಯೋಜನೆಗೆ ಅನುಮತಿ ನೀಡಿ ಆದೇಶ ಹೊರಡಿಸಿದೆ.

ಸದರಿ ಯೋಜನೆಯನ್ನು ಈ ಕೆಳಕಂಡ ಅನುಷ್ಠಾನ ಸಮಿತಿಯಿಂದ ಅನುಷ್ಠಾನ ಗೊಳಿಸತಕ್ಕದ್ದು.

**ಅನುಷ್ಠಾನ ಸಮಿತಿ:**

1) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು – ಅಧ್ಯಕ್ಷರು

2) ಆಯಾ ಜಿಲ್ಲೆಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಡಿ.ಡಿ.ಪಿ.ಐ) – ಸದಸ್ಯಕಾರ್ಯದರ್ಶಿಗಳು

3) ಆಯಾಯ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು. – ಸದಸ್ಯ ಕಾರ್ಯದರ್ಶಿಗಳು

ಈ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಟಾನಗೊಳಿಸಲು ಸಮಿತಿಯ ಅಧ್ಯಕ್ಷರಿಗೆ ಅವಶ್ಯವಿದ್ದಲ್ಲಿ ಹೆಚ್ಚುವರಿ ಸದಸ್ಯರನ್ನು ನೇಮಿಸಲು ಅಧಿಕಾರ ನೀಡಲಾಗಿದೆ.

**8) ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ :**

Generated by Foxit PDF Creator © Foxit Software
http://www.foxitsoftware.com For evaluation only.

ಸರ್ಕಾರಿ ಆದೇಶ ಸಂಖ್ಯೆ: ಸಕಇ 87 ಅಸಂಯೋ 2006 (2), ದಿನಾಂಕ: 09–08–2006ರ ಆದೇಶದಲ್ಲಿ ಪ್ರತಿ ಜಿಲ್ಲೆಯ ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾದ, ಪಿ.ಯು.ಸಿಯಲ್ಲಿ ಉತ್ತೀರ್ಣರಾದ ಮತ್ತು ಆ ವರ್ಷದಲ್ಲಿ ತೇರ್ಗಡೆ ಹೊಂದಿದ ಕಲೆ, ವಾಣಿಜ್ಯ ಮತ್ತು ವೃತ್ತಿಪರೇತರ ಪದವೀಧರರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಶೇಕಡ 30 ಎಸ್.ಎಸ್.ಎಲ್.ಸಿ, ಶೇಕಡ 40 ಪಿ.ಯು.ಸಿ ಮತ್ತು ಶೇಕಡ 30 ಪದವೀಧರರು ಈ ಅನುಪಾತದಲ್ಲಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ವಯ ಪ್ರತಿ ಜಿಲ್ಲೆಯ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿ ಪಿ.ಯು.ಸಿ.ಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರೂ. 3,000/– ಪಿ.ಯು.ಸಿಯಲ್ಲಿ ಉತ್ತೀರ್ಣರಾಗಿ ಪದವಿ ಕೋರ್ಸ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರೂ. 4,000/– ಮತ್ತು ಪಧವೀಧರರಿಗೆ (ವೃತ್ತಿಪರ ಕೋರ್ಸಿನ ಪದವೀಧರರನ್ನು ಹೊರತು ಪಡಿಸಿ) ಮುಂದಿನ ವರ್ಷಗಳಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು ರೂ. 5,000/– ವನ್ನು ನೀಡಲು ಆದೇಶಿಸಿದೆ.

**<u>ಷರತ್ತುಗಳು:</u>**

(1) ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು.

(2) ಅರ್ಜಿಯನ್ನು ಶಾಲೆಯ ಮುಖ್ಯೋಪಾದ್ಯಾಯರು ಮತ್ತು ಪದವೀಧರರು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಮೂಲಕ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಇವರು ಅಧಿಕೃತ ಸ್ವೀಕೃತಿ ಪಟ್ಟಿಯನ್ನು ಕಾಪಾಡತಕ್ಕದ್ದು.

(3) ಪ್ರೋತ್ಸಾಹ ಧನವನ್ನು ತುಲನಾತ್ಮಕ ರೀತಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಇಳಿಕೆ ಕ್ರಮದನುಸಾರ ಹಂಚಿಕೆ ಮಾಡತಕ್ಕದ್ದು.

**<u>ಅನುಷ್ಠಾನ ಸಮಿತಿ:</u>**

1) ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು – ಅಧ್ಯಕ್ಷರು

2) ಆಯಾ ಜಿಲ್ಲೆಯ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಡಿ.ಡಿ.ಪಿ.ಐ) – ಸದಸ್ಯ ಕಾರ್ಯದರ್ಶಿ

3) ಆಯಾ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು. – ಸದಸ್ಯ ಕಾರ್ಯದರ್ಶಿ

## <u>ಜಿಲ್ಲಾವಲಯ ಕಾರ್ಯಕ್ರಮಗಳು:</u>

### <u>1)ಅಲ್ಪಸಂಖ್ಯಾತರಿಗಾಗಿ ತರಬೇತಿ: ಕಾನೂನು ಪದವಿಧರರಿಗೆ ತರಬೇತಿ ಭತ್ಯೆ ನೀಡಿಕೆ</u>

ರಾಜ್ಯದಲ್ಲಿ ಕಾನೂನು ಪದವಿ ಪಡೆದಿರುವ ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಸರ್ಕಾರಿ ಅಡ್ವೋಕೇಟ್ ಅಥವಾ 20 ವರ್ಷಗಳಿಗಿಂತ ಹೆಚ್ಚಿನ ಅನುಭವವುಳ್ಳ ವಕೀಲರಿಂದ ತರಬೇತಿ ಕೊಡಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದಲ್ಲಿ ಪ್ರತಿ ಜಿಲ್ಲೆಗೆ ತಲಾ ಇಬ್ಬರು ಅಭ್ಯರ್ಥಿಗಳಿಗೆ ತರಬೇತಿ ಕೊಡಿಸಲಾಗುತ್ತದೆ. ತರಬೇತಿ ಅವಧಿಯು 4 ವರ್ಷಗಳಾಗಿದ್ದು ತರಬೇತಿ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.1000/–ದಂತೆ ತರಬೇತಿ ಭತ್ಯೆ ನೀಡಲಾಗುವುದು. ಈ

Generated by Foxit PDF Creator © Foxit Software
http://www.foxitsoftware.com For evaluation only.

ತರಬೇತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿ ಇರುತ್ತದೆ.

| | | |
|---|---|---|
| 1 | ಜಿಲ್ಲಾಧಿಕಾರಿಗಳು/ಜಿಲ್ಲಾ ದಂಡಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ವಕೀಲರ ಅಸೋಸಿಯೇಷನ್ ಅಧ್ಯಕ್ಷರು | ಸದಸ್ಯರು |
| 3 | ಜಿಲ್ಲಾ ಸರ್ಕಾರಿ ಅಭಿಯೋಜಕ (ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್) | ಸದಸ್ಯರು |
| 4 | ಜಿಲ್ಲಾ ನ್ಯಾಯಿಕ ನೆರವು ಮಂಡಳಿಯ ಕಾರ್ಯದರ್ಶಿಗಳು | ಸದಸ್ಯರು |
| 5 | ಜಿಲ್ಲಾ ಸರ್ಕಾರಿ ವಕೀಲರು (ಗೌರ್ನಮೆಂಟ್ ಪ್ಲೀಡರ್) | ಸದಸ್ಯರು |
| 6 | ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಈ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಸಬೇಕು.

(1) ಕಾನೂನು ತರಬೇತಿ ಪಡೆಯುವ ಅಭ್ಯರ್ಥಿಯು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯಗಳಲ್ಲಿ ಯಾವುದಾದರೊಂದು ಸಮುದಾಯಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.

(2) ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ. 15000 ಕ್ಕೆ ಮೀರಿರಬಾರದು. ಪ್ರವರ್ಗ–1 ರಡಿಯಲ್ಲಿ ಬರುವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ.

(3) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

(4) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷಗಳೊಳಗೆ ಇರಬೇಕು ಮತ್ತು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯು 2 ವರ್ಷಗಳ ಅವಧಿಯೊಳಗೆ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

(5) ಅಭ್ಯರ್ಥಿಗಳು ಸಲ್ಲಿಸುವ ಮಾಹೆಯಾನ ದಿನಚರಿಯಲ್ಲಿ ಪರಿಶೀಲಿಸಿ ತರಬೇತಿ ಭತ್ಯೆಯನ್ನು ಮಂಜೂರು ಮಾಡಲಾಗುವುದು.

(6) ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಡುವಂತಿಲ್ಲ. ಈ ಬಗ್ಗೆ ಒಂದು ಮುಚ್ಚಳಿಕೆ ಪತ್ರ ನೀಡಬೇಕು. ಒಂದು ವೇಳೆ ಸರ್ಕಾರಿ ಉದ್ಯೋಗ ದೊರಕಿದಲ್ಲಿ ಅಥವಾ ನ್ಯಾಯಾಧಿಕಾರಿಯಾಗಿ ನೇಮಕಾತಿ ಹೊಂದಿದಲ್ಲಿ ಜಿಲ್ಲಾ ಸಮಿತಿಯ ಗಮನಕ್ಕೆ ತಂದು ತರಬೇತಿ ಬಿಡಬಹುದು. ವಿಶೇಷ ಸಂದರ್ಭದಲ್ಲಿ ತರಬೇತಿ ಬಿಡಬೇಕಾದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು.

(7) ಪ್ರತಿ ಜಿಲ್ಲೆಗೆ ಎರಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿರುವುದರಿಂದ ಇವುಗಳಲ್ಲಿ ಒಬ್ಬ ಅಭ್ಯರ್ಥಿಯನ್ನು ಮುಸ್ಲಿಂ ಹಾಗೂ ಇನ್ನೊಬ್ಬ ಅಭ್ಯರ್ಥಿಯನ್ನು ಇತರೆ ಅಲ್ಪಸಂಖ್ಯಾತರ ಸಮುದಾಯಗಳಿಂದ ಆಯ್ಕೆ ಮಾಡಬೇಕು.

**<u>ವೇಳಾಪಟ್ಟಿ:</u>**

| | | |
|---|---|---|
| 1 | ಅರ್ಜಿಗಳನ್ನು ಆಹ್ವಾನಿಸುವ ದಿನಾಂಕ | ಜುಲೈ 15 |
| 2 | ಅರ್ಜಿ ಸ್ವೀಕರಿಸಲು ಕಡೆಯ ದಿನಾಂಕ | ಜುಲೈ 30 |
| 3 | ಆಯ್ಕೆ ಸಮಿತಿ ಸಭೆ ನಡೆಸುವ ದಿನಾಂಕ | ಆಗಸ್ಟ್ 10 |
| 4 | ಅಭ್ಯರ್ಥಿಗಳ ಆಯ್ಕೆ ಪಟ್ಟಿ ಪ್ರಕಟಣೆ | ಆಗಸ್ಟ್ 10 |

Generated by Foxit PDF Creator © Foxit Software
http://www.foxitsoftware.com For evaluation only.

## 2)ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು:

### (ಅ) ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳು:

ಮತೀಯ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರಶಿಕ್ಷಣಕ್ಕೆ ಅನುಕೂಲವಾಗುವಂತೆ 25 ವಿದ್ಯಾರ್ಥಿನಿಲಯಗಳನ್ನು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿವೆ. ಮೆಟ್ರಿಕ್ ನಂತರದ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾಸಿಕ ರೂ. 500/–ರ ದರದಲ್ಲಿ ಊಟ, ವಸತಿ ಹಾಗೂ ಉಚಿತ ಗ್ರಂಥಾಲಯ ಸೌಕರ್ಯವನ್ನು ಕಲ್ಪಿಸಲಾಗುವುದು. ಈ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ಈ ಕೆಳಕಂಡ ನಿಬಂಧನೆಗಳನ್ನು ಪೂರೈಸಬೇಕು.

(1) ವಿದ್ಯಾರ್ಥಿಗಳು ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.

(2) ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು.

(3) ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು ರೂ.15,000/– ಕ್ಕೆ ಮೀರಬಾರದು. (ಪ್ರವರ್ಗ–1ರಲ್ಲಿ ಬರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಾರ್ಷಿಕ ವರಮಾನದ ಮಿತಿ ಇರುವುದಿಲ್ಲ).

(4) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಶೇ.75 ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ.25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಲ ವಿದ್ಯಾರ್ಥಿಗಳಿಗೆ ನೀಡುವುದು.

(5) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಮುಸ್ಲಿಂ–ಶೇ.77, ಕ್ರಿಶ್ಚಿಯನ್ ಶೇ.14, ಜೈನ್–ಶೇ–6, ಬೌದ್ಧ–ಶೇ.2 ಮತ್ತು ಸಿಖ್‌ರಿಗೆ ಶೇ.1 ರಷ್ಟು ಪ್ರವೇಶ ನೀಡುವುದು. ನಿರ್ದಿಷ್ಟ ಜನಾಂಗದ ವಿದ್ಯಾರ್ಥಿಗಳಿಂದ ಸಾಕಷ್ಟು ಪ್ರಮಾಣದಲ್ಲಿ ಅರ್ಜಿಗಳು ಬಾರದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

(6) ವಿದ್ಯಾರ್ಥಿನಿಲಯಗಳಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ.85–90 ಹಾಗೂ ಪಟ್ಟಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ.10–15 ರಷ್ಟು ಸ್ಥಾನಗಳನ್ನು ನೀಡಬೇಕು.

(7) ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಹಿಂದಿನ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಉತ್ತೀರ್ಣರಾಗಿರಬೇಕು.

(8) ವಿದ್ಯಾರ್ಥಿನಿಲಯವನ್ನು ಶೈಕ್ಷಣಿಕ ವರ್ಷದ 10 ತಿಂಗಳ ಅವಧಿಗೆ ನಡೆಸಬೇಕು. 10 ತಿಂಗಳ ನಂತರವೂ ವಾರ್ಷಿಕ ಪರೀಕ್ಷೆಗಳು ನಡೆದಲ್ಲಿ ಈ ಅವಧಿಯನ್ನು ವಿಸ್ತರಿಸಲಾಗುವುದು.

(9) ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

Generated by Foxit PDF Creator © Foxit Software
http://www.foxitsoftware.com For evaluation only.

**ವೇಳಾಪಟ್ಟಿ:**

| | | |
|---|---|---|
| 1 | ಹೊಸ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವುದು | ಜುಲೈ 01 |
| 2 | ಅರ್ಜಿಸಲ್ಲಿಸಲು ಕಡೆಯ ದಿನಾಂಕ | ಜುಲೈ 15 |
| 3 | ನವೀಕರಣವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಪ್ರಾರಂಭಿಸುವುದು | ಜೂನ್ 01 |
| 4 | ಹೊಸ ಅಭ್ಯರ್ಥಿಗಳ ಆಯ್ಕೆ ಸಮಿತಿ ಸಭೆ ನಡೆಸುವುದು | ಜುಲೈ 20 |
| 5 | ಹೊಸ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಪ್ರಕಟಣೆ | ಜುಲೈ 20 |
| 6 | ಹೊಸ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯ ಪ್ರಾರಂಭಿಸುವುದು. | ಜುಲೈ 25 |

**(ಆ) ಮೆಟ್ರಿಕ್ ಪೂರ್ವ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯಗಳು :**

ಮತೀಯ ಅಲ್ಪಸಂಖ್ಯಾತರ ಬಾಲಕ/ಬಾಲಕಿಯರ ಶಿಕ್ಷಣಕ್ಕೆ ಅನುಕೂಲವಾಗುವಂತೆ 48 ವಿದ್ಯಾರ್ಥಿನಿಲಯಗಳನ್ನು ವಿವಿಧ ಜಿಲ್ಲೆಗಳು ಮತ್ತು ತಾಲ್ಲೂಕುಗಳಲ್ಲಿ ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿವೆ. 5ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಬಾಲಕ/ಬಾಲಕಿಯರು ಈ ವಿದ್ಯಾರ್ಥಿನಿಲಯಗಳ ಸೌಲಭ್ಯವನ್ನು ಪಡೆಯುವರು. ಈ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಕೆಳಕಂಡ ಸವಲತ್ತುಗಳನ್ನು ನೀಡಲಾಗುತ್ತಿದೆ.

(1) ರೂ. 450/-ರ ದರದಲ್ಲಿ ಊಟದ ವ್ಯವಸ್ಥೆ

(2) ಉಚಿತ ವಸತಿ ಸೌಲಭ್ಯ

(3) ರೂ. 25/-ರ ದರದಲ್ಲಿ ಎಣ್ಣೆ, ಸಾಬೂನು, ಸೋಪು, ಪೇಸ್ಟ್ ಇತ್ಯಾದಿ ಸಾದಿಲ್ವಾರು ವೆಚ್ಚಗಳ ನೀಡಿಕೆ.

(4) ವಾರ್ಷಿಕ ರೂ. 400/-ರ ದರದಲ್ಲಿ ಸಮವಸ್ತ್ರ ಸರಬರಾಜು.

(5) ವಾರ್ಷಿಕ ರೂ. 200/-ರ ದರದಲ್ಲಿ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ ಸರಬರಾಜು

(6) ಪ್ರತಿ ವಿದ್ಯಾರ್ಥಿನಿಲಯಕ್ಕೆ ವಾರ್ಷಿಕ ರೂ. 750/-ರಂತೆ ದಿನಪತ್ರಿಕೆ ಮತ್ತು ವಾರಪತ್ರಿಕೆ ಸರಬರಾಜು.

(7) ಪ್ರತಿ ವಿದ್ಯಾರ್ಥಿಗೆ ರೂ. 300/-ರ ದರದಲ್ಲಿ ಹಾಸಿಗೆ ಹೊದಿಕೆ ಸರಬರಾಜು

(8) ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮೂವರು ವಿಶೇಷ ಭೋದಕರಿಂದ ಪಾಠ ಪ್ರವಚನ (ಪ್ರತಿ ಬೋಧಕರಿಗೆ ಮಾಸಿಕ ರೂ. 500/-ರಂತೆ ಗೌರವಧನ)

(9) ವಿದ್ಯಾರ್ಥಿಗಳು ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.

(10) ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಶಾಲೆಗಳಲ್ಲಿ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು.

(11) ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು ರೂ. 15,000/-ಕ್ಕೆ ಮೀರಬಾರದು. (ಪ್ರವರ್ಗ-1ರಲ್ಲಿ ಬರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಾರ್ಷಿಕ ವರಮಾನದ ಮಿತಿ ಇರುವುದಿಲ್ಲ).

(12) ಪ್ರತಿ ವಿದ್ಯಾರ್ಥಿನಿಲಯದಲ್ಲಿ ಶೇ. 75 ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಶೇ. 25 ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ನೀಡುವುದು.

Generated by Foxit PDF Creator © Foxit Software
http://www.foxitsoftware.com For evaluation only.

(13) ಪ್ರತಿ ವಿದ್ಯಾರ್ಥಿನಿಲಯಗಳಲ್ಲಿ ಮುಸ್ಲಿಂ–ಶೇ.77, ಕ್ರಿಶ್ಚಿಯನ್ ಶೇ.14, ಜೈನ್ ಶೇ.6 ಬೌದ್ಧ ಶೇ.2 ಮತ್ತು ಸಿಖ್‌ರಿಗೆ ಶೇ. 1ರಷ್ಟು ಪ್ರವೇಶ ನೀಡುವುದು. ನಿರ್ದಿಷ್ಟ ಜನಾಂಗದ ವಿದ್ಯಾರ್ಥಿಗಳಿಂದ ಮೇಲಿನ ಪ್ರಮಾಣದಲ್ಲಿ ಅರ್ಜಿಗಳು ಬಾರದಿದ್ದಲ್ಲಿ ಲಭ್ಯವಿರುವ ಇತರೆ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

(14) ವಿದ್ಯಾರ್ಥಿನಿಲಯಗಳಲ್ಲಿ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ.90 ಹಾಗೂ ಪಟ್ಟಣ ಪ್ರದೇಶದ ಅಭ್ಯರ್ಥಿಗಳಿಗೆ ಶೇ. 10ರಷ್ಟು ಸ್ಥಾನಗಳನ್ನು ನೀಡಬೇಕು.

(15) ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ತಮ್ಮ ಹಿಂದಿನ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಉತ್ತೀರ್ಣರಾಗಿರಬೇಕು.

(16) ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ನಿಯಮಾನುಸಾರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

**<u>ವೇಳಾಪಟ್ಟಿ</u>** :

| | | |
|---|---|---|
| 1 | ಹೊಸ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವುದು | ಏಪ್ರಿಲ್–20 |
| 2 | ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಮೇ–15 |
| 3 | ಅರ್ಜಿ ಪರಿಶೀಲನೆ ಹಾಗೂ ಆಯ್ಕೆ | ಮೇ–25 |
| 4 | ವಿದ್ಯಾರ್ಥಿನಿಲಯಗಳ ಪ್ರಾರಂಭ<br>ಅ). ನವೀಕರಣ ವಿದ್ಯಾರ್ಥಿಗಳಿಗೆ<br>ಆ). ಹೊಸ ವಿದ್ಯಾರ್ಥಿಗಳಿಗೆ | ಜೂನ್–1<br><br>ಜೂನ್–15 |

## ೩) <u>ಅಲ್ಪಸಂಖ್ಯಾತರಿಗಾಗಿ ಶಿಷ್ಯವೇತನ : ಐಟಿಐ ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಸ್ಟೈಫಂಡ್</u>

ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಅಂಗೀಕೃತ ಕೈಗಾರಿಕಾ ಸಂಸ್ಥೆಗಳಲ್ಲಿ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಎಸ್.ಎಸ್.ಎಲ್.ಸಿ.ಯ ನಂತರ ಐಟಿಐ ಮತ್ತು ಡಿಪ್ಲೋಮಾ ತರಗತಿಗಳಲ್ಲಿ ತರಬೇತಿ ಪಡೆಯುತ್ತಿರುವ ಅಲ್ಪಸಂಖ್ಯಾತರ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ. 150/–ರಂತೆ 10 ತಿಂಗಳಿಗೆ ಸ್ಟೈಫಂಡ್ ನೀಡಲಾಗುತ್ತಿದೆ. ಸ್ಟೈಫಂಡ್ ಪಾವತಿಗಾಗಿ ಈ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಸಬೇಕಾಗಿರುತ್ತದೆ.

(1) ವಿದ್ಯಾರ್ಥಿಯು ಅಲ್ಪಸಂಖ್ಯಾತರ ಜನಾಂಗಕ್ಕೆ ಅಂದರೆ ಮುಸ್ಲಿಂ, ಕ್ರಿಶ್ಚಿಯನ್, ಜೈನರು, ಸಿಖ್‌ರು, ಬೌದ್ಧರು ಹಾಗೂ ಪಾರ್ಸಿ ಸಮುದಾಯಕ್ಕೆ ಸೇರಿದ್ದು ರಾಜ್ಯದ ನಿವಾಸಿಯಾಗಿರಬೇಕು.

(2) ಸ್ಟೈಫಂಡ್ ಪಡೆಯುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ. 15,000/–ಗಳಿಗೆ ಮೀರಬಾರದು.

(3) ವಿದ್ಯಾರ್ಥಿಯು ಸರ್ಕಾರಿ ಅಥವಾ ಅನುದಾನ ಪಡೆಯುವ ವಿದ್ಯಾರ್ಥಿನಿಲಯಗಳಲ್ಲಿ ಅಭ್ಯರ್ಥಿಯಾಗಿರಬಾರದು.

(4) ಸ್ಟೈಫಂಡ್ ಪಡೆಯುವ ವಿದ್ಯಾರ್ಥಿಯು ಮೆರಿಟ್ ವಿದ್ಯಾರ್ಥಿವೇತನವನ್ನು ಹೊರತುಪಡಿಸಿ ಇತರೆ ವಿದ್ಯಾರ್ಥಿ ವೇತನ ಅಥವಾ ಸ್ಟೈಫಂಡ್ ಪಡೆಯಲು ಅರ್ಹರಾಗಿರುವುದಿಲ್ಲ.

(5) ಸ್ಟೈಫಂಡ್ ಪಡೆಯುವ ಅಭ್ಯರ್ಥಿಯು ಕಾಲೇಜಿನಲ್ಲಿ ಪ್ರತಿ ಮಾಹೆಯಲ್ಲಿ ಶೇ. 75ರಷ್ಟು ಹಾಜರಾತಿ ಹೊಂದಿರಬೇಕು. ಈ ಬಗ್ಗೆ ಕಾಲೇಜು ಪ್ರಾಂಶುಪಾಲರು ಹಾಜರಾತಿಯ ದೃಢೀಕರಣ ನೀಡಬೇಕು.

(6) ಸ್ಟೈಫಂಡ್ ಮಂಜೂರಾತಿಯು ಲಭ್ಯವಿರುವ ಆಯವ್ಯಯವನ್ನು ಆಧರಿಸುತ್ತದೆ.

Generated by Foxit PDF Creator © Foxit Software
http://www.foxitsoftware.com For evaluation only.

**ವೇಳಾಪಟ್ಟಿ** :

| | | |
|---|---|---|
| 1 | ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು | ಜುಲೈ–1 |
| 2 | ಅರ್ಜಿ ಸ್ವೀಕರಿಸುವ ಕಡೆಯ ದಿನಾಂಕ | ಜುಲೈ–31 |
| 3 | ಅರ್ಜಿಗಳ ಪರಿಶೀಲನೆ ಮತ್ತು ನವೀಕರಣದ ಅಭ್ಯರ್ಥಿಗಳಿಗೆ ಸ್ಟೈಫಂಡ್ ಮಂಜೂರು ಮಾಡುವುದು | ಆಗಸ್ಟ್–31 |
| 4 | ಹೊಸ ಅರ್ಜಿಗಳಿಗೆ ಸ್ಟೈಫಂಡ್ ನೀಡಿಕೆ | ಸೆಪ್ಟೆಂಬರ್ 1ರ ತರುವಾಯ |

## 4) ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯಗಳು:

ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಜನಾಂಗದ ವಿದ್ಯಾಥಿಗಳು ಮಾಧ್ಯಮಿಕ ಹಾಗೂ ಪ್ರೌಢಶಾಲೆ ಹಂತದಲ್ಲಿ ವ್ಯಾಸಂಗ ಕಡಿತಗೊಳಿಸದೆ ಮುಂದುವರೆಸುವಂತೆ ಸಹಕಾರಿಯಾಗುವ ದೃಷ್ಟಿಯಿಂದ ಅಲ್ಪಸಂಖ್ಯಾತರು ನಡೆಸುತ್ತಿರುವ ಹಾಲಿ 60 ಮತೀಯ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ ನೀಡಲಾಗುತ್ತದೆ ಹಾಗೂ 3350 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯುತ್ತಿರುವರು. ಈ ವಿದ್ಯಾರ್ಥಿನಿಲಯಗಳು ಅನುದಾನ ಮಂಜೂರಾತಿಗೆ ಕೆಳಕಂಡ ನಿಬಂಧನೆಗೊಳಿಸಲ್ಪಟ್ಟಿರುತ್ತವೆ.

(1) ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ. 450/– ರಂತೆ 10 ತಿಂಗಳಿಗೆ ವಿದ್ಯಾರ್ಥಿಗಳ ಶಾಲೆ ಮತ್ತು ವಿದ್ಯಾರ್ಥಿನಿಲಯದ ಹಾಜರಾತಿಗಳನ್ವಯ ಊಟದ ವೆಚ್ಚ ನೀಡಲಾಗುವುದು.

(2) ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನವು ರೂ.15000/– ಗಳಿಗೆ ಮೀರಬಾರದು.

(3) ಊಟದ ವೆಚ್ಚ ಹೊರತುಪಡಿಸಿ ಬೇರೆ ವೆಚ್ಚಗಳನ್ನು ಸಂಸ್ಥೆಯವರೇ ಭರಿಸಬೇಕು.

(4) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಅನುದಾನ ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ. ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ವಿದ್ಯಾರ್ಥಿನಿಲಯಗಳನ್ನು ಕಾಲಕಾಲಕ್ಕೆ ಭೇಟಿ ನೀಡಿ ಸಲ್ಲಿಸುವ ತನಿಖಾ ವರದಿಗಳ ಮೇಲೆ ವಿದ್ಯಾರ್ಥಿನಿಲಯವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಧೃಡಪಡಿಸಿಕೊಂಡ ನಂತರವೇ ವಿದ್ಯಾರ್ಥಿನಿಲಯಕ್ಕೆ ಅನುದಾನ ಮಂಜೂರು ಮಾಡಬೇಕು.

(5) ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದವರಾಗಿರಬೇಕು. ಆದರೆ ಈ ಬಗ್ಗೆ ನಿರ್ದಿಷ್ಟವಾದ ಅನುಪಾತವಿರುವುದಿಲ್ಲ.

**ವೇಳಾಪಟ್ಟಿ** :

| | | |
|---|---|---|
| 1 | ವಿದ್ಯಾರ್ಥಿಗಳಿಂದ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸುವುದು | ಏಪ್ರಿಲ್–20 |
| 2 | ಅರ್ಜಿ ಸ್ವೀಕರಿಸುವ ಕಡೆಯ ದಿನಾಂಕ | ಮೇ–31 |
| 3 | ಅರ್ಜಿಗಳ ಪರಿಶೀಲನೆ ಹಾಗೂ ಆಯ್ಕೆ | ಮೇ–25 |
| 4 | ಆಯ್ಕೆ ಪಟ್ಟಿ ಪ್ರಕಟಣೆ | ಮೇ–25 |
| 5 | ವಿದ್ಯಾರ್ಥಿನಿಲಯಗಳ ಪ್ರಾರಂಭ ಅ.ನವೀಕರಣ ವಿದ್ಯಾರ್ಥಿಗಳಿಗೆ ಆ.ಹೊಸ ವಿದ್ಯಾರ್ಥಿಗಳಿಗೆ | ಜೂನ್–1<br>ಜೂನ್–15 |

Generated by Foxit PDF Creator © Foxit Software
http://www.foxitsoftware.com For evaluation only.

## 5) ಹೊಸ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡುವುದು:

ಹೊಸದಾಗಿ ಮತೀಯ ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸುವ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡುವ ಕಾರ್ಯಕ್ರಮವು ಅನುಷ್ಠಾನದಲ್ಲಿರುತ್ತದೆ. ಇದಕ್ಕಾಗಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ಗಮನಿಸಬೇಕಾಗುತ್ತದೆ.

(1) ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯವನ್ನು ನಡೆಸುವ ಸಂಸ್ಥೆಯವರು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದವರಾಗಿರಬೇಕು.

(2) ಅಲ್ಪಸಂಖ್ಯಾತರ ಸಂಸ್ಥೆಯವರು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಪೂರ್ವಾನುಮತಿ ಪಡದು ಕನಿಷ್ಟ ಎರಡು ವರ್ಷ ಉಚಿತವಾಗಿ ವಿದ್ಯಾರ್ಥಿನಿಲಯವನ್ನು ನಡೆಸಿರಬೇಕು. ವಿದ್ಯಾರ್ಥಿನಿಲಯ ನಡೆಸುವ ಸಂಸ್ಥೆಯು ಕರ್ನಾಟಕ ಸಂಘಗಳು ಸಹಕಾರಿ ಸಂಘಗಳ ನೋಂದಣಿ ಅಧಿನಿಯಮಗಳನ್ವಯ ನೋಂದಾಣಿಯಾಗಿರಬೇಕು. ಮಾನ್ಯತೆ ನೀಡಿಕೆಗಾಗಿ ಈ ಕೆಳಕಂಡ ದಾಖಲಾತಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು.

(3) ಸರ್ಕಾರಿ ಆದೇಶ ಸಂಎಸ್‌ಡಬ್ಲ್ಯೂಎಲ್ 179 ಬಿಎಂಎಸ್ 85 ದಿನಾಂಕ: 15–07–88 ರಲ್ಲಿ ನಿಗದಿಪಡಿಸಿರುವ ನಮೂನೆ–ಎ.ದಲ್ಲಿ. ಅರ್ಜಿ ಸಲ್ಲಿಸಬೇಕು.

(4) ಸಂಘದ ನೋಂದಣಿ ಪ್ರಮಾಣ ಪತ್ರ.

(5) ವ್ಯವಸ್ಥಾಪಕ ಮಂಡಳಿ ಸದಸ್ಯರ ಪಟ್ಟಿ.

(6) ಸಂಸ್ಥೆಯ ಬೈಲಾ.

(7) ಹಿಂದಿನೆರಡು ವರ್ಷಗಳ ಆಡಿಟ್ ವರದಿ (ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ದೃಢೀಕೃತ)

(8) ಎರಡು ವರ್ಷಗಳ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಶಾಲಾ ಹಾಜರಾತಿ.

(9) ಎರಡು ವರ್ಷಗಳ ವಿದ್ಯಾರ್ಥಿನಿಲಯದ ಹಾಜರಾತಿ.

(10) ಎರಡು ವರ್ಷಗಳ ವಿದ್ಯಾರ್ಥಿನಿಲಯದ ಆಹಾರ ಸಾಮಗ್ರಿಗಳ ಖರ್ಚು ವೆಚ್ಚದ ಪಟ್ಟಿ.

(11) ಸಂಸ್ಥೆಯವರು ನಡೆಸಿದ ಸಭೆಯ ನಡವಳಿ.

(12) ಎರಡು ವರ್ಷದ ವಿದ್ಯಾರ್ಥಿನಿಲಯದ ಸಿಬ್ಬಂದಿ ವಿವರ.

(13) ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳ ಜಾತಿ/ಆದಾಯ ಪ್ರಮಾಣ ಪತ್ರಗಳು.

(14) ತನಿಖಾ ವರದಿ (ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಅಧಿಕಾರಿಗಳಿಂದ)

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಅಧಿಕಾರಿಗಳು ವಿದ್ಯಾರ್ಥಿನಿಲಯಕ್ಕೆ ಆಗಿಂದಾಗ್ಗೆ ಭೇಟಿ ನೀಡಿ ನಡೆಸಿದ ತಪಾಸಣೆಯ ಬಗ್ಗೆ ನೀಡುವ ತನಿಖಾ ವರದಿಗಳನ್ನಾಧರಿಸಿ ವಿದ್ಯಾರ್ಥಿನಿಲಯವು ತೃಪ್ತಿಕರವಾಗಿ ನಡೆಯುತ್ತಿರುವುದನ್ನು ಖಚಿತಪಡಿಸಿಕೊಂಡ ನಂತರ ಜಿಲ್ಲಾಧಿಕಾರಿಗಳು ವಿದ್ಯಾರ್ಥಿನಿಲಯದ ಮಾನ್ಯತೆ ನೀಡಿಕೆಗಾಗಿ ನಿರ್ದೇಶಕರು ಅಲ್ಪಸಂಖ್ಯಾತರ ಇಲಾಖೆ ಬೆಂಗಳೂರು ಇವರಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು. ಅಗತ್ಯ ಪ್ರಸ್ತಾವನೆಗಳನ್ನು ಅಕ್ಟೋಬರ್ 2006ರೊಳಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು.

ಮಾನ್ಯತೆ ನೀಡುವ ಅಧಿಕಾರವು ಸರ್ಕಾರಕ್ಕೆ ಇರುತ್ತದೆ. ಹಾಗೂ ಆಯವ್ಯಯ ಲಭ್ಯತೆಯನ್ನುಸರಿಸಿ ಹೊಸ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡಲಾಗುವುದು.

Generated by Foxit PDF Creator © Foxit Software
http://www.foxitsoftware.com For evaluation only.

## 6). ವೃತ್ತಿಪರ ತರಬೇತಿ:

ಅಲ್ಪಸಂಖ್ಯಾತರ ನಿರುದ್ಯೋಗಿ ಯುವಕ/ಯುವತಿಯವರಿಗೆ ವಿವಿಧ ವೃತ್ತಿಪರ ಕೋರ್ಸ್‌ಗಳಾದ ಫ್ಯಾಶನ್ ಡಿಸೈನಿಂಗ್, ಗಾರ್ಮೆಂಟ್ ಮೇಕಿಂಗ್, ಸರ್ವಿಸಿಂಗ್ ಇನ್ ಎಲೆಕ್ಟ್ರಾನಿಕ್ ಎಕ್ವಿಪ್‌ಮೆಂಟ್, ಎಲೆಕ್ಟ್ರಿಕಲ್ ವೈಯರ್‌ಮನ್ ಟ್ರೈನಿಂಗ್ ಫಾರ್ ವೈಯರಿಂಗ್ ಲೈಸೆನ್ಸ್, ಏರ್‌ಕಂಡಿಶನಿಂಗ್ ಇನ್ ರಿಫ್ರಿಜಿರೇಷನ್, ಸೂಪರ್‌ವೈಜರ್ ಇನ್ ಸಿವಿಲ್ ಇಂಜಿನಿಯರಿಂಗ್ ಕನ್‌ಸ್ಟ್ರಕ್ಷನ್, ರಿಪೇರಿಂಗ್ ಆಫ್ ಡೊಮೆಸ್ಟಿಕ್ ಎಲೆಕ್ಟ್ರಿಕಲ್ ಅಪ್ಲೆಯನ್ಸಸ್‌ಗಳಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳ ಮೂಲಕ ತರಬೇತಿ ನೀಡಿ ಸ್ವಯಂ ಉದ್ಯೋಗದಲ್ಲಿ ಸ್ವಾವಲಂಬಿಗಳಾಗಲು ಪ್ರೋತ್ಸಾಹ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಪ್ರತಿ ಅಭ್ಯರ್ಥಿಗೆ ರೂ. 500/–ರಂತೆ ಮಾಸಿಕ ಸ್ಟೈಪೆಂಡ್ ನೀಡಲಾಗುವುದು. ಈ ಕಾರ್ಯಕ್ರಮವನ್ನು ಕೆಳಕಂಡ ನಿಬಂಧನೆಗಳೊಂದಿಗೆ ಜಾರಿಗೊಳಿಸಲಾಗುವುದು.

(1) ಅಭ್ಯರ್ಥಿಗಳು ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಮತೀಯ ಅಲ್ಪಸಂಖ್ಯಾತರ ಜನಾಂಗದವರಾಗಿರಬೇಕು.

(2) ತರಬೇತಿಗೆ ಆಯ್ಕೆ ಮಾಡುವ ಅಭ್ಯರ್ಥಿಗಳ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ ಆಗಿರುತ್ತದೆ.

(3) ಅಭ್ಯರ್ಥಿಗಳ ವಯೋಮಿತಿಯನ್ನು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 40 ವರ್ಷಗಳೆಂದು ನಿಗದಿಪಡಿಸಿದೆ.

(4) ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 48000/– ಕ್ಕಿಂತ ಹೆಚ್ಚಿರಬಾರದು.

(5) ಸದರಿ ತರಬೇತಿಯನ್ನು ಒಂದಕ್ಕಿಂತ ಹೆಚ್ಚು ಬಾರಿ ಪಡೆಯಲು ಅವಕಾಶ ಇರುವುದಿಲ್ಲ.

(6) ಸದರಿ ತರಬೇತಿಗೆ ಅಭ್ಯರ್ಥಿಗಳನ್ನು ಆಯಾಯ ಜಿಲ್ಲೆಯ ಜಿಲ್ಲೆಗಳ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವರು.

(7) ಆಯ್ಕೆಯಾದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಜಿಲ್ಲೆಯ ಪಾಲಿಟೆಕ್ನಿಕ್‌ಗಳಲ್ಲಿ ತರಬೇತಿ ನೀಡುವುದು.

(8) ಅಭ್ಯರ್ಥಿಗಳು ತರಬೇತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

**ವೇಳಾಪಟ್ಟಿ:**

| | | |
|---|---|---|
| 1 | ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವುದು | ಜುಲೈ–05 |
| 2 | ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಜುಲೈ–25 |
| 3 | ಅರ್ಜಿಗಳ ಪರಿಶೀಲನೆ ಹಾಗೂ ಆಯ್ಕೆ | ಆಗಸ್ಟ್–01 |
| 4 | ತರಬೇತಿಗೆ ನಿಯೋಜನೆ | ಆಗಸ್ಟ್–10 |
| 5 | ತರಬೇತಿ ಪ್ರಾರಂಭ | ಆಗಸ್ಟ್–20 |

## 8). ಅನಾಥಾಲಯಗಳಿಗೆ ಅನುದಾನ ನೀಡಿಕೆ

ಅಲ್ಪಸಂಖ್ಯಾತರ ಸ್ವಯಂಸೇವಾ ಸಂಸ್ಥೆಗಳು ನಡೆಸುತ್ತಿರುವ 40 ಅನಾಥಾಲಯಗಳಿಗೆ 3569 ಅನಾಥಾಲಯ/ನಿರ್ಗತಿಕ ಮಕ್ಕಳಾ ಇಲಾಖೆ ಈ ಸಂಸ್ಥೆಗಳಲ್ಲಿ ಅನಾಥ ಹಾಗೂ ನಿರ್ಗತಿಕ ಮಕ್ಕಳ 1ನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುವವರಿದ್ದು ಅವರಿಗೆ ಭೋಜನ ವೆಚ್ಚಕ್ಕಾಗಿ ಪ್ರತಿ ತಿಂಗಳಿಗೆ ಪ್ರತಿ ಮಗುವಿಗೆ ರೂ.350/– ರಂತೆ ಅನುದಾನ ನೀಡಲಾಗುತ್ತಿದೆ.

Generated by Foxit PDF Creator © Foxit Software
http://www.foxitsoftware.com For evaluation only.

ಈ ಕಾರ್ಯಕ್ರಮವು ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿದ್ದು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಅನಾಥಾಲಯಗಳಿಗೆ ಅನುದಾನ ಮಂಜೂರಾತಿಗೆ ಕೆಳಕಂಡ ಮುಖ್ಯ ಅಂಶಗಳನ್ನು ಗಮನಿಸಬೇಕಾಗುತ್ತದೆ.

(1) ತಂದೆ-ತಾಯಿ ಅಥವಾ ಇಬ್ಬರೂ ಇಲ್ಲದ ಮಗುವಿನ ಪೋಷಕರ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ. 11,000-00 ಮತ್ತು ಅದಕ್ಕಿಂತ ಕಡಿಮೆ ಇರುವ ಮಕ್ಕಳನ್ನು ಅನಾಥರೆಂದು ಪರಿಗಣಿಸಲಾಗುತ್ತದೆ. ಮಗುವಿನ ತಂದೆಯ/ತಾಯಿಯ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ. 11,000-00 ಗಳು ಅದಕ್ಕಿಂತ ಕಡಿಮೆ ಇರುವವರನ್ನು ನಿರ್ಗತಿಕರೆಂದು ಪರಿಗಣಿಸಲಾಗುತ್ತದೆ.

(2) ಅನಾಥಾಲಯದ ವ್ಯವಸ್ಥಾಪಕ ವರ್ಗವು ಅನಾಥರಿಗೆ ಸಂಬಂಧಿಸಿದಂತೆ ಪ್ರವೇಶ ನೀಡುವ ಸಮಯದಲ್ಲಿ ಒಂದು ಸಾರಿ ಮಾತ್ರ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಬೇಕು. ಸರ್ಕಾರದ ತಿದ್ದುಪಡಿ ಸಂಖ್ಯೆ: ಸಕಕಾ 65 ಬಿಎಂಎಸ್ 92 ದಿನಾಂಕ: 23-09-1992ರಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಕಕಾ 179 ಬಿಎಂಎಸ್ 78 ದಿನಾಂಕ: 23-09-1992ರಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಕಕಾ 179 ಬಿಎಂಎಸ್ 78 ದಿನಾಂಕ: 10-12-1982 ರಲ್ಲಿ ಅನಾಥಾಲಯಗಳಿಗೆ ಸಹಾಯ ಧನನಿಯಾಮಾವಳಿಗಳ ನಿಯಮ 18 (ಬಿ)ಯನ್ನು ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗಿದೆ. ಖಾಸಗಿ ಅನಾಥಾಲಯಗಳ ಮೇಲ್ವಿಚಾರಣಾ ಮಂಡಳಿಯು 1ನೇ ತರಗತಿ, 5ನೇ ತರಗತಿ ಹಾಗು 8ನೇ ತರಗತಿ ಪ್ರವೇಶ ಸಮಯಗಳಲ್ಲಿ ಮಾತ್ರ ಅನಾಥ/ನಿರ್ಗತಿಕ ಪ್ರಮಾಣ ಪತ್ರವನ್ನು ಪಡೆಯುವುದು. ಉಳಿದ ವರ್ಷಗಳಿಗೆ ಇದೇ ಪ್ರಮಾಣ ಪತ್ರಗಳು ಅರ್ಹವಾಗುತ್ತದೆ.

(3) ಪ್ರವೇಶ ನೀಡಿದ 3 ತಿಂಗಳೊಳಗಾಗಿ (ಅನಾಥ/ನಿರ್ಗತಿಕ) ನಿಲಯಾರ್ಥಿಗಳ ಸ್ಥಿತಿಗತಿಗಳ ಬಗ್ಗೆ ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಅನಾಥ/ನಿರ್ಗತಿಕ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳಬೇಕು.

(4) ಸರ್ಕಾರಿ ಅಥವಾ ಮಾನ್ಯತೆ ಪಡೆದ ಖಾಸಗಿ ಶಾಲೆಗಳಲ್ಲಿ ಪ್ರಾಥಮಿಕ ತರಗತಿ, ಮಾಧ್ಯಮಿಕ ತರಗತಿ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮತ್ತು ನಿರ್ಗತಿಕ ಮಕ್ಕಳು ಮಾತ್ರ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ನಿಯಮ (ಡಿ) ಪ್ರಕಾರ ಅನಾಥ ಮತ್ತು ನಿರ್ಗತಿಕ ಮಕ್ಕಳು ಅವರ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸುವವರೆಗೂ ಅನಾಥಾಲಯದಲ್ಲಿ ಮುಂದುವರೆಸಲು ಅವಕಾಶವಿರುತ್ತದೆ.

(5) ಮತಿಯ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯದಲ್ಲಿರುವ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ರೂ.150 ರಂತೆ 12 ತಿಂಗಳಿಗೆ ವಿದ್ಯಾರ್ಥಿಗಳ ಶಾಲೆ ಮತ್ತು ವಿದ್ಯಾರ್ಥಿನಿಲಯದ ಹಾಜರಾತಿಯನ್ವಯ ಊಟದ ವೆಚ್ಚ ನೀಡಲಾಗುವುದು.

(6) ಊಟದ ವೆಚ್ಚ ಹೊರತುಪಡಿಸಿ ಬೇರೆ ವೆಚ್ಚಗಳನ್ನು ಸಂಸ್ಥೆಯವರೇ ಭರಿಸಬೇಕು.

(7) ಜಿಲ್ಲಾಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಅನಾಥಾಲಯಗಳನ್ನು ಕಾಲಕಾಲಕ್ಕೆ ಭೇಟಿ ನೀಡಿ ಸಲ್ಲಿಸುವ ತನಿಖಾ ವರದಿಗಳ ಮೇಲೆ ವಿದ್ಯಾರ್ಥಿನಿಲಯವು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಧೃಢಪಡಿಸಿಕೊಂಡ ನಂತರವೇ ಅನಾಥಾಲಯಕ್ಕೆ ಅನುದಾನ ಮಂಜೂರು ಮಾಡಬೇಕು.

(8) ಅಲ್ಪಸಂಖ್ಯಾತರ ಅನಾಥಾಲಯದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದವರಾಗಿರಬೇಕು. ಆದರೆ ಈ ಬಗ್ಗೆ ನಿರ್ದಿಷ್ಟವಾದ ಅನುಪಾತವಿರುವುದಿಲ್ಲ.

(9) ಅನುದಾನವನ್ನು ಕಾಲಕಾಲಕ್ಕೆ ಹೊರಡಿಸಲಾದ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ವಯ ಮಂಜೂರು ಮಾಡುವುದು.

Generated by Foxit PDF Creator © Foxit Software
http://www.foxitsoftware.com For evaluation only.

**ವೇಳಾಪಟ್ಟಿ:**

| | | |
|---|---|---|
| 1 | ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸುವುದು | ಏಪ್ರಿಲ್–20 |
| 2 | ಅರ್ಜಿ ಸ್ವೀಕರಿಸಲು ಕಡೆಯ ದಿನಾಂಕ | ಮೇ–15 |
| 3 | ಅರ್ಜಿಗಳ ಪರಿಶೀಲನೆ ಹಾಗೂ ಆಯ್ಕೆ | ಮೇ–25 |
| 4 | ಆಯ್ಕೆ ಪಟ್ಟಿ ಪ್ರಕಟಣೆ | ಮೇ–25 |
| 5 | ಅನಾಥಾಲಯಗಳ ಪ್ರಾರಂಭ<br>ಅ)ನವೀಕರಣ ವಿದ್ಯಾರ್ಥಿಗಳಿಗೆ<br>ಆ) ಹೊಸ ವಿದ್ಯಾರ್ಥಿಗಳಿಗೆ | <br>ಜೂನ್–01<br>ಜೂನ್–15 |